ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು-560065
* ಸಮಗ್ರ ಕೃಷಿ ಹವಾಮಾನ ವರದಿ ಪತ್ರಿಕೆ *

ದಿನಾಂಕ: 08.08.2014

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ.

ಈ ವಾರದ ಮುನ್ಸೂಚನೆ (ದಿನಾಂಕ 09.08.14 –13.08.14 ವರೆಗೆ)

	09.08.14	10.08.14	11.08.14	12.08.14	13.08.14
ಮಳೆ (ಮಿ ಮಿ)	3	2	3	4	6
ಗರಿಷ್ಠ ಉಷ್ಣಾಂಶ(ಡಿ.ಸೆ.)	28	27	27	27	28
ಕನಿಷ್ಠ ಉಷ್ಣಾಂಶ (ಡಿ.ಸೆ.)	20	20	21	21	21
ಮೋಡ (ಪ್ರಮಾಣ)	7	6	7	7	7
ಅರ್ದ್ರತೆ ೭.೨೦ ಬೆ (ಶೇ)	89	88	87	87	90
ಅರ್ದ್ರತೆ ೨.೨೦ ಮ (ಶೇ)	63	57	58	63	57
ಗಾಳಿಯ ವೇಗ (ಕಿ.ಮಿ/ಗಂಟೆಗೆ)	8	8	6	6	8
ಗಾಳಿಯ ದಿಕ್ಕು (ಡಿಗ್ರಿ)	260	260	260	260	260

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳಲ್ಲಿ ಮೋಡಕವಿದ ವಾತವರಣವಿದ್ದು ಸಂಜೆ ಅಥವಾ ರಾತ್ರಿ ವೇಳೆ ಹಗುರ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ 27.0 -28.0^{o}C ಮತ್ತು ಕನಿಷ್ಠ 20.0 -21.0 ^{o}C ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 87-90 % ಇದ್ದು, ಮಧ್ಯಾಹ್ನ 57-63 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 6-8 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಸಾಮಾನ್ಯ ಸೂಚನೆಗಳು:

- ಭೂಮಿಯಲ್ಲಿ ಸಾಕಷ್ಟು ತೇವಾಂಶದ ಹದವರಿತು ರಾಗಿ ತಳಿಗಳಾದ ಇಂಡಾಫ್-5 ಮತ್ತು ಪಿ.ಆರ್-202, ಜಿ.ಪಿ.ಯು-26,45,48 ಹೆಕ್ಟೇರಿಗೆ-5 ಕೆಜಿಯಂತೆ ಸಾಲಿನಿಂದ ಸಾಲಿಗೆ 25 ಸೆ.ಮೀಟರ್ ಮತ್ತು ಬೀಜದಿಂದ ಬೀಜಕ್ಕೆ 10 ಸೆ.ಮೀಟರ್ ಇರುವಂತೆ ಬಿತ್ತನೆ ಮಾಡುವುದು
- ವಿವಿಧ ಹಂತಗಳ ಸಸಿಮಡಿಗಳನ್ನು ತಯಾರಿಸಿಕೊಳ್ಳಬೇಕು ಮತ್ತು ರಾಗಿ ಬೆಳೆಗಳಲ್ಲಿ ಕಳೆಯನ್ನು ತೆಗೆಯುವುದು.
- ತೊಗರಿ ಬೆಳೆಯಲ್ಲಿ ಅಂತರ ಬೇಸಾಯ ಮಾಡುವುದು ಮತ್ತು ಕಳೆಯನ್ನು ತೆಗೆಯುವುದು.
- ಬಿತ್ತನೆಗೆ ಬೇಕಾದ ಉತ್ತಮ ಗುಣಮಟ್ಟದ ಬೀಜಗಳನ್ನು ಹತ್ತಿರದ ರೈತ ಸಂಪರ್ಕ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ ಅಥವಾ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಖರೀದಿಸಲು ಸೂಚಿಸಲಾಗಿದೆ.

  ಅಲಸಂದೆ : C-152 ಮತ್ತು TVX-944

  ಅವರೆ: HA-1 ಮತ್ತು HA-2

  ಮುಸುಕಿನ ಜೋಳ: ಗಂಗಾ-11, ಡೆಕ್ಕನ್-103, ಕಾಂಪೋಸಿಟ್ ಎನ್.ಎ.ಸಿ-6002 ಮತ್ತು 6006
- ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
- ಜಾನುವಾರುಗಳಿಗೆ ಕಾಲುಬಾಯಿ ಜ್ವರಕ್ಕೆ ಲಸಿಕೆಯನ್ನು ಹಾಕಿಸುವುದು ಸೂಕ್ತ.

ತಾಂತ್ರಿಕ ಅಧಿಕಾರಿ :
ನಾಗೇಶ್.ಎಲ್
ಕೃ.ವಿ.ವಿ, ಬೆಂಗಳೂರು.

ನೋಡಲ್ ಅಧಿಕಾರಿ :
ಡಾ.ಎನ್.ಎ.ಜನಾರ್ಧನ ಗೌಡ
ಕೃ.ವಿ.ವಿ, ಬೆಂಗಳೂರು.